**ಹೆಚ್ಚುವರಿ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ,**
**ಬೆಂಗಳೂರು ನಗರ**

ಸಿ.ಸಿ. ನಂ.**4104/2023**

**ಪಿರ್ಯಾದಿಯ ಹೆಸರು** - ಸತ್ಯವತಿ ದೇವಿ ವೆಲಿದಂಡ

**ವಿರುದ್ಧ**

**ಆಪಾದಿತರ ಹೆಸರು** - ಟಿ.ಆರ್.ಗಣೇಶ್

**ದಂ.ಪ್ರ.ಸಂ.ಕಲಂ *313* ರಡಿಯಲ್ಲಿ ದಾಖಲಿಸಿಕೊಂಡ ಆಪಾದಿತನ ಹೇಳಿಕೆಗಳು**

ಪ್ರಶ್ನೆ 1ಃ ಪಿರ್ಯಾದುದಾರರು ತಮ್ಮ ಸಾಕ್ಷೀ ವಿಚಾರಣೆಯ ಭಾಗವಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಏನು ಹೇಳಿರುತ್ತಾರೆ ಎಂದು ತಿಳಿದುಕೊಂಡಿರುತ್ತೀರ?

ಉತ್ತರಃ **ತಿಳಿದುಕೊಂಡಿದ್ದೇನೆ.**

ಪ್ರಶ್ನೆ 2ಃ ಪ್ರಾ.ಸ.1- ಪಿರ್ಯಾದಿ ಸತ್ಯವತಿ ದೇವಿ ವೆಲಿದಂಡ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನಿಮ್ಮ ಹೆಂಡತಿ ಹಾಗು ನೀವು ಪಿರ್ಯಾದುದಾರರನ್ನು ನಿಮ್ಮ ಕ್ಯಾಟರಿಂಗ್ ಬಿಸಿನೆಸ್ ಸಲುವಾಗಿ ಸಾಲವನ್ನು ಕೇಳಿದ್ದು, ದಿಃ29.03.2021ರಂದು ಅಗ್ರಿಮೆಂಟ್ ಅನ್ನು ನೀವು ಮತ್ತು ನಿಮ್ಮ ಹೆಂಡತಿ ಪಿರ್ಯಾದುದಾರರೊಂದಿಗೆ ಮಾಡಿಕೊಂಡು, ಅದರಂತೆ ರೂ.10,00,000/- ಹಣವನ್ನು ಸಹಕಾರನಗರ ಶಾಖೆಯ ಐ.ಸಿ.ಐ.ಸಿ.ಐ ಬ್ಯಾಂಕಿನ ಚೆಕ್ ನಂ.108063 ಮೂಲಕ ದಿಃ29.03.2021ರಂದು ನೀಡಿರುತ್ತಾರೆ ಹಾಗು ಸದರಿ ಹಣವನ್ನು ಹನ್ನೊಂದು ತಿಂಗಳೊಳಗೆ ಮರುಪಾವತಿಸುತ್ತೇನೆಂದು ವಾಗ್ದಾನ ನೀಡಲಾಗಿತ್ತು ಎಂದು ತಿಳಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ **ಸುಳ್ಳು.**

ಪ್ರಶ್ನೆ 3ಃ ಮುಂದುವರೆದು, ನೀವು ಮತ್ತು ನಿಮ್ಮ ಹೆಂಡತಿ ನಿಮ್ಮ ತುರ್ತು ವೈದ್ಯಕೀಯ ಖರ್ಚಿಗಾಗಿ ರೂ.13,00,000/- ಹಣವನ್ನು ಕೇಳಿದ್ದು ಸದರಿ ಹಣವನ್ನು

This is a True Copy of the Court Records Online. Authenticated @ districts.ecourtsindia.com/cnr/KABC020138222023/truecopy/order-2.pdf

www.ecourtsindia.com

ಪಿರ್ಯಾದುದಾರರು ದಿ:01.10.2021ರಂದು ನಗದು ರೂಪದಲ್ಲಿ ನೀಡಿರುತ್ತಾರೆ ಹಾಗು ಸದರಿ ಹಣವನ್ನು ಒಟ್ಟಾಗಿ ನೀಡುವುದಾಗಿ ತಿಳಿಸಿರುತ್ತೀರ ಎಂದು ತಿಳಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ **ಸುಳ್ಳು.**

ಪ್ರಶ್ನೆ 4: ಮುಂದುವರೆದು ನೀವು ಒಟ್ಟು ರೂ.2,40,000/- ಹಣವನ್ನು ಪಿರ್ಯಾದುದಾರರಿಗೆ ನೀಡಿದ್ದು ಉಳಿದ ಹಣವನ್ನು ನೀಡುವುದಾಗಿ ಹೇಳುತ್ತಾ ಬಂದಿರುತ್ತೀರ ಹಾಗು ಉಳಿದ ರೂ.20,60,000/- ಹಣವನ್ನು ಕೊಡುವಂತೆ ಪಿರ್ಯಾದುದಾರರು ಒತ್ತಾಯ ಮಾಡಿದಾಗ, ಭದ್ರತೆಗೆಂದು ನೀಡಿದ್ದ ಚೆಕ್ಕುಗಳನ್ನು ನಗದೀಕರಣಕ್ಕೆ ಸಲ್ಲಿಸುವಂತೆ ಸೂಚಿಸಿರುತ್ತೀರ ಹಾಗು ಮುಂದುವರೆದು ಲೋನ್ ಅಗ್ರಿಮೆಂಟ್ ನಲ್ಲಿ ನಮೂದಿಸಿರುವಂತೆ ಚೆಕ್ ನಂ.378540 ನಲ್ಲಿ ಹತ್ತು ಲಕ್ಷ ಹಣವನ್ನು ಹಾಗು ಉಳಿದ ಅಂಕಣಗಳನ್ನು ಭರ್ತಿ ಮಾಡಿಕೊಳ್ಳುವಂತೆ ನೀವು ಮಾಹಿತಿ ನೀಡಿರುತ್ತೀರ ಹಾಗು ವಿಜಯ ಬ್ಯಾಂಕ್ ನ ಚೆಕ್ ನಂ.485829 ರಲ್ಲಿ ಹತ್ತು ಲಕ್ಷ ಹಣವನ್ನು ಹಾಗು ಉಳಿದ ಅಂಕಣಗಳನ್ನು ಭರ್ತಿ ಮಾಡಿಕೊಳ್ಳುವಂತೆ ನಿಮ್ಮ ಹೆಂಡತಿ ಪಿರ್ಯಾದುದಾರರಿಗೆ ವಿನಂತಿಸಿಕೊಂಡಿರುತ್ತೀರ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ **ಸುಳ್ಳು.**

ಪ್ರಶ್ನೆ 5: ಪಿರ್ಯಾದುದಾರರು ಮುಂದುವರೆದು, ಚೆಕ್ ನಂ.378540 ಅನ್ನು ನೀವು ಸಹಿ ಮಾಡಿ ನೀಡಿರುತ್ತೀರ ಹಾಗು ಉಳಿದ ರೂ.60,000/- ಹಣವನ್ನು ಮೂರು ಕಂತುಗಳಲ್ಲಿ ಪಾವತಿ ಮಾಡುವುದಾಗಿ ನಿಮ್ಮ ಹೆಂಡತಿ ಇಂದುಮತಿಯವರು ಹೇಳಿದ್ದಾರೆ ಎಂದು ತಿಳಿಸಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ **ಸುಳ್ಳು.**

ಪ್ರಶ್ನೆ 6: ಪ್ರಾ.ಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು, ನೀವು ನೀಡಿದ ಚೆಕ್ ನಂ.485829 ಅನ್ನು ನಗದೀಕರಣಕ್ಕಾಗಿ ತಾವು ಖಾತೆ ಹೊಂದಿರುವ ಬ್ಯಾಂಕಿನಲ್ಲಿ ಸಲ್ಲಿಸಿದಾಗ "**Erstwhile Vijaya Bank cheque stopped in clearing**"" ಎಂಬ ಕಾರಣದಿಂದ ದಿಃ 14.02.2023 ರಂದು ಹಿಂಬರಹದೊಂದಿಗೆ ಅಮಾನ್ಯಗೊಂಡಿರುತ್ತದೆ, ಎಂದು ಹೇಳಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

ಉತ್ತರಃ **ಸುಳ್ಳು.**

ಪ್ರಶ್ನೆ 7 : ಮುಂದುವರೆದು, ದಿ:15.03.2023 ರಂದು ತಮ್ಮ ವಕೀಲರ ಮೂಲಕ ನಿಮಗೆ ಆರ್.ಪಿ.ಎ.ಡಿ ಮೂಲಕ ನೋಟೀಸನ್ನು ನೀಡಿರುವುದಾಗಿ, ನೋಟೀಸು ನಿಮಗೆ

www.ecourtsindia.com

This is a True Copy of the Court Records Online. Authenticated @ districts.ecourtsindia.com/cnr/KABC020138222023/truecopy/order-2.pdf

ಜಾರಿಯಾಗಿರುತ್ತದೆ ಎಂದು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರ ಏನು?
ಉತ್ತರಃ **ನೋಟೀಸು ತಲುಪಿರುತ್ತದೆ.**

ಪ್ರಶ್ನೆ 8: ಪ್ರಾ.ಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಂದುವರೆದು ನೋಟೀಸಿಗೆ ಸುಳ್ಳು ಪ್ರತ್ಯುತ್ತರವನ್ನು ನೀಡಿರುತ್ತೀರ ಹಾಗೂ ಹಣವನ್ನು ಮರುಪಾವತಿಸಿರುವುದಿಲ್ಲ ಎಂದು ಹೇಳಿರುತ್ತಾರೆ, ಇದಕ್ಕೆ ನಿಮ್ಮ ಉತ್ತರ ಏನು?
ಉತ್ತರಃ **ಸೂಕ್ತ ಜವಾಬು ನೀಡಿದ್ದೇನೆ.**

ಪ್ರಶ್ನೆ 9: ಪ್ರಾ.ಸಾ.1 ರವರು ಮುಂದುವರೆದು ನೀವು ನೀಡಿದ ಚೆಕ್, ಬ್ಯಾಂಕ್ ಮೆಮೋ, ನೋಟೀಸಿನ ಕಛೇರಿ ಪ್ರತಿ, ಅಂಚೆ ರಶೀದಿ, ಅಂಚೆ ಸ್ವೀಕೃತಿ, ರಿಪ್ಲೈ ನೋಟೀಸ್, ಸಾಲದ ಕರಾರು ಪತ್ರ ಇವುಗಳನ್ನು ಹಾಜರುಪಡಿಸಿ ನಿ.ಪಿ.1 ರಿಂದ ನಿ.ಪಿ.6 ಎಂದು ಗುರುತಿಸಿಕೊಂಡಿರುತ್ತಾರೆ, ಇದಕ್ಕೆ ನಿಮ್ಮ ಉತ್ತರ ಏನು?
ಉತ್ತರಃ **ತಿಳಿದುಕೊಂಡಿರುತ್ತೇನೆ.**

ಪ್ರಶ್ನೆ 10: ನಿಮ್ಮ ಪರ ಪ್ರತಿರಕ್ಷಣೆಯ ಸಾಕ್ಷ್ಯ ವಿಚಾರಣೆ ಮಾಡಿಸುವುದಿದೆಯಾ?
ಉತ್ತರಃ **ನನ್ನ ಪರವಾಗಿ ಪ್ರತಿರಕ್ಷಣೆಯ ಸಾಕ್ಷ್ಯ ಇರುತ್ತದೆ.**

ಪ್ರಶ್ನೆ 11: ನೀವು ಏನನ್ನಾದರೂ ಹೇಳುವುದಿದೆಯಾ?
ಉತ್ತರಃ **ಪಿರ್ಯಾದುದಾರರು ಸುಳ್ಳು ಕೇಸನ್ನು ಹಾಕಿರುತ್ತಾರೆ.**

ಈ ಮೇಲಿನ ಆಪಾದಿತನು ಕೊಟ್ಟಿರುವಂತಹ ಉತ್ತರಗಳನ್ನು ಓದಿ ಹೇಳಿ, ಕೇಳಿ ಆಪಾದಿತನು ಹೇಳಿದಂತೆಯೇ ಯಥಾವತ್ತಾಗಿ ದಾಖಲಿಸಿದೆ ಎಂದು ಧೃಡೀಕರಿಸುತ್ತೇನೆ.

ಸ್ಥಳಃ ಬೆಂಗಳೂರು
ದಿನಾಂಕ-24.10.2024

**(ಹೆಚ್.ಪಿ.ಮೋಹನ್ ಕುಮಾರ್)**
**6ನೇ ಎಎಸ್‌ಸಿಜೆ ಮತ್ತು ಎ.ಸಿ.ಜೆ.ಎಮ್**
**ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC020138222023/truecopy/order-2.pdf